vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
ಸೋಮವಾರ 14 ಜುಲೈ 2025 14 JULY 2025
IV c

ಗಂಗಾವತಿ ಕೃಷಿ ಸಂಶೋಧನಾ ಕೇಂದ್ರದ ಆವಿಷ್ಕಾರ

ಜೈವಿಕ ಬಲವರ್ಧನೆಗೆ ಜಿಂಕ್ ಸ್ಫೂರ್ತಿ ಭತ್ತ!

■ ಜಗನ್ನಾಥ ಆರ್.ದೇಸಾಯಿ ಗಂಗಾವತಿ

ಆಧುನಿಕ ಜೀವನ ಶೈಲಿಯಿಂದ ಎದುರಾಗುತ್ತಿರುವ ನಾನಾ ರೀತಿಯ ಸಮಸ್ಯೆಗಳಿಗೆ ಆಹಾರದಲ್ಲಿ ಪೋಷಕಾಂಶದ ಕೊರತೆಯೇ ಕಾರಣ ಎಂಬ ಚರ್ಚೆ ವಿಶ್ವಮಟ್ಟದಲ್ಲಿ ಕೇಳಿಬರುತ್ತಿದೆ. ಪರಿಣಾಮ ಪೌಷ್ಟಿಕ ಆಹಾರ ಸೇವನೆಯತ್ತ ವಿಶ್ವಮಟ್ಟದಲ್ಲಿ ಗಮನ ಹೆಚ್ಚು ಕೇಂದ್ರೀಕೃತವಾಗುತ್ತಿದೆ. ಸತ್ವಯುತ ಆಹಾರ ಸೇವನೆಗೆ ಎಲ್ಲರೂ ಸಿದ್ಧವಾಗಿ ಒತ್ತು ಕೊಡುತ್ತಿದ್ದು, ಆಧುನಿಕ ಜೀವನ ಶೈಲಿಯಲ್ಲಿ ಕಂಡುಬರುತ್ತಿರುವ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಸಂಶೋಧನೆ ನಡೆಯುತ್ತಲೇ ಇವೆ. ಈ ನಿಟ್ಟಿನಲ್ಲಿ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರ ಮಹತ್ವದ ಸಾಧನೆ ಮಾಡಿದೆ. ಗಂಗಾವತಿ ಎಂದಾಕ್ಷಣ ಇಲ್ಲಿ ಬೆಳೆಯುವ ಸಣ್ಣ ಭತ್ತ ನೋನಾ ಎಲ್ಲರ ಕಣ್ಮುಂದೆ ಬರುತ್ತದೆ. ವಿಶ್ವಮಟ್ಟದಲ್ಲಿ ಗಂಗಾವತಿಯ ನೋನಾ ಮಸೂರಿ ಅಕ್ಕಿ ಅಪ್ಪರಮಟ್ಟಿಗೆ ಹೆಸರುವಾಸಿ. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಗಂಗಾವತಿ ಕೃಷಿ ಸಂಶೋಧನಾ ಕೇಂದ್ರವು ಭತ್ತದ ತಳಿ ಅಭಿವೃದ್ಧಿ ಮೈಲುಗಲ್ಲು ಸಾಧಿಸಿದೆ. ಇದೀಗ ಮುಂದುವರಿದ ಭಾಗವಾಗಿ ಇಂದಿನ ಆಗತ್ಯವಾಗಿರುವ ಜೈವಿಕ ಬಲವರ್ಧಿತ ಸತು(ಜಿಂಕ್)ಭರಿತ ಭತ್ತದ ತಳಿ ಅಭಿವೃದ್ಧಿ ಪಡಿಸಿದೆ. ಅದುವೇ ಸ್ಫೂರ್ತಿ(ಜಿಎನ್‌ವಿ 1906). ಫಿಲಿಪೈನ್ಸ್‌ನ ಅಂತಾರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆ, ಹೈದರಾಬಾದ್ ಭಾರತೀಯ ಅಕ್ಕಿ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ರಾಯಚೂರು ಕೃಷಿ ವಿವಿಯ ಗಂಗಾವತಿಯ ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆಯಡಿ ಗಂಗಾವತಿ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳ ತಂಡದ ಕಳೆದ 7 ವರ್ಷಗಳ ಶ್ರಮದ ಪ್ರತಿಫಲವೇ ಸ್ಫೂರ್ತಿ-ಜಿಎನ್‌ವಿ 1906 ಭತ್ತದ ತಳಿ.



ಭತ್ತವೇ ಪ್ರಮುಖ ಆಹಾರ ಧಾನ್ಯ: ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ನೇರಿ ದೇಶದ ಪ್ರಮುಖ ನೀರಾವರಿ ಪ್ರದೇಶದಲ್ಲಿ ಭತ್ತದ ಬೆಳೆ ಆವರಿಸಿಕೊಂಡಿದೆ. ಭತ್ತವು ಒಂದು ಪ್ರಮುಖ ಆಹಾರ ಧಾನ್ಯವಾಗಿದ್ದು, ವಿಶ್ವದಲ್ಲಿ ಸುಮಾರು 3.5 ಬಿಲಿಯನ್ ಜನರು ಅನ್ನವನ್ನು ತಮ್ಮ ಮುಖ್ಯ ಆಹಾರವಾಗಿ ಉಪಯೋಗಿಸುತ್ತಿದ್ದಾರೆ. ವಿಶ್ವದಲ್ಲಿ ವಿಷ್ಯಾ ಖಂಡದಲ್ಲೇ ಭತ್ತವನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಭೂಮಿ ಮೇಲಿರುವ ಶೇ.90 ಜನರ ಜೀವಾಳ ಅನ್ನ. ಇಡೀ ವಿಶ್ವದಲ್ಲಿ ಭತ್ತ ಬೆಳೆಯುವುದು ಮತ್ತು ಅನ್ನವನ್ನು ಪ್ರಮುಖ ಆಹಾರವಾಗಿ ಬಳಸುವಲ್ಲಿ ಭಾರತಕ್ಕೆ ಎರಡನೇ ಸ್ಥಾನ. ದೇಶದ 43.58 ಮಿಲಿಯನ್ ಹೆಕ್ಟೇರ್ ಕ್ಷೇತ್ರದಲ್ಲಿ ಭತ್ತ ಬೆಳೆಯಲಾಗುತ್ತದೆ. ವಾರ್ಷಿಕ 130 ಮಿಲಿಯನ್ ಟನ್‌ನಷ್ಟು ಭತ್ತದ ಉತ್ಪಾದನೆಯಾಗುತ್ತದೆ. ಅದರಲ್ಲೂ ಕರ್ನಾಟಕದಲ್ಲಿ 1.3 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುತ್ತಿದ್ದು, ವಾರ್ಷಿಕ3.5 ಮಿಲಿಯನ್ ಟನ್ ಉತ್ಪಾದನೆಯಾಗುತ್ತಿದೆ.



ಸ್ಫೂರ್ತಿ ತಳಿಯ ವಿಶೇಷಗಳು

ಸ್ಫೂರ್ತಿ ಭತ್ತದ ತಳಿ ಜಿಎನ್‌ವಿ 1906 ಕಾಳಿನಲ್ಲಿ 26.03 ಪಿಪಿಎಮ್(ಪಾರ್ಟ್ಸ್ ಪರ್ ಮಿಲಿಯನ್) ನಷ್ಟು ಜಿಂಕ್ ಅಂಶ ಹೊಂದಿದೆ. ಈ ತಳಿಯ ಸಸಿಯು 110 ರಿಂದ 115 ಸೆಂ.ಮೀ ನಷ್ಟು ಎತ್ತರ ಬೆಳೆಯಲಿದೆ. ಮಧ್ಯಮಾವಧಿ ತಳಿಯಿದಾಗಿದೆ. ಮುಂಗಾರು ಹಾಗೂ ಬೇಸಿಗೆ ಹಂಗಾಮಿಗೆ ಸೂಕ್ತವಾಗಿರುವ ಈ ತಳಿಯು 125-130 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಒಟ್ಟಿಯ ಕಾಳು ಉದ್ದ ಹಾಗೂ ದಪ್ಪ ಇರಲಿದ್ದು, ಜಿಎನ್‌ವಿ 1906 ತಳಿಯು ಹೆಕ್ಟರ್‌ಗೆ ಸರಾಸರಿ 53 ಕ್ವಿಂಟಾಲ್ ಇಳುವರಿ ತರಲಿದ್ದು, ಸದ್ಯ ಅಚ್ಚುಕಟ್ಟು ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯಲಾಗುವ ತಳಿಗಳಾದ ಐಆರ್-64ಗಿಂತ ಶೇ. 4.24ರಷ್ಟು, ಡಿಆರ್‌ಆರ್ ಧನ್-45ಗಿಂತ ಶೇ. 6.42ರಷ್ಟು ಮತ್ತು ಬಿಟ್ಟಿಮುತ್ತಾಲು ತಳಿಗಿಂತ ಶೇ.29.19ರಷ್ಟು ಹೆಚ್ಚಿನ ಕಾಳಿನ ಇಳುವರಿ ಬೆಳೆಗಾರರಿಗೆ ತಂದುಕೊಡುವ ಸಾಮರ್ಥ್ಯ ಹೊಂದಿದೆ. ಇಂದಿನ ದಿನಮಾನದಲ್ಲಿ ಜನರು ಸೇವಿಸುತ್ತಿರುವ ಅಕ್ಕಿಯಲ್ಲಿ ಜಿಂಕ್ ಪೌಷ್ಟಿಕಾಂಶದ ಕೊರತೆಯಿರುವುದು ಸಾಬೀತಾಗಿದೆ. ಇದನ್ನು ನಿವಾರಿಸಿ ಮಾನವನ ಆರೋಗ್ಯ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಬಹುದಾದ ಅದರಲ್ಲೂ ಆಪೌಷ್ಟಿಕತೆ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳು ಹಾಗೂ ಗರ್ಭಿಣಿಯರಿಗೆ ಸ್ಫೂರ್ತಿ ಭತ್ತದ ತಳಿ ವರದಾನವಾಗಿ ಪರಿಣಮಿಸಲಿದೆ ಎಂಬುದು ಕೃಷಿ ವಿಜ್ಞಾನಿಗಳ ನಂಬಿಕೆ. ಜಿಂಕ್ ಪೋಷಕಾಂಶ ಹೆಚ್ಚಳಕ್ಕೆ ಮಾತ್ರೆಗಳನ್ನು ಸೇವಿಸಲು ವೈದ್ಯರು ಸಲಹೆ ನೀಡುವುದು ಕಾಣಸಿಗುತ್ತಿದೆ. ಈ ತಳಿಯನ್ನು ಸದ್ಯ ದೇಶದ ವಿವಿಧ ರಾಜ್ಯಗಳಲ್ಲಿ ರೈತರಿಗೆ ಪ್ರಾಯೋಗಿಕವಾಗಿ ಬೀಜೋತ್ಪಾದನೆಗೆ ವಿತರಿಸಿದ್ದು, ಮುಂದಿನ ಹಂಗಾಮಿನ ವೇಳೆಗೆ ರೈತರಲ್ಲರಿಗೆ ಸ್ಫೂರ್ತಿ ಭತ್ತದ ತಳಿ ರೈತರಿಗೆ ಬೆಳೆಯಲು ಲಭ್ಯವಾಗುವ ನಿರೀಕ್ಷೆಯಿದೆ.

ಸ್ಫೂರ್ತಿ ಭತ್ತದ ತಳಿ ವಿವಿಧ ಸಂಸ್ಥೆಗಳ ಸಹಕಾರದಿಂದ ಸಂಶೋಧನೆ ಸಾಧ್ಯವಾಗಿದೆ. ಇದರಲ್ಲಿ ಜಿಂಕ್ ಅಗತ್ಯ ಪ್ರಮಾಣದಲ್ಲಿರುವಂತೆಯೇ ಅಭಿವೃದ್ಧಿ ಪಡಿಸಲಾಗಿದೆ. ಇದರಿಂದ ಆರೋಗ್ಯದ ನಾನಾ ರೀತಿಯ ಸಮಸ್ಯೆಗಳಿಗೆ ಪರಿಹಾರ ದೊರೆಯುವ ವಿಶ್ವಾಸವಿದೆ. ಈಗಾಗಲೇ ರಾಯಚೂರು ಕೃಷಿ ವಿವಿ ನೇರಿ ದೇಶದ ನಾನಾ ರಾಜ್ಯಗಳಲ್ಲಿ ರೈತರಿಗೆ ಈ ತಳಿಯ ಭತ್ತ ಬೆಳೆಯಲು ಬೀಜ ವಿತರಿಸಲಾಗಿದೆ. ಮುಂದಿನ ಹಂಗಾಮಿಗೆ ಆಸಕ್ತ ಎಲ್ಲ ರೈತರಿಗೆ ಬಿತ್ತನೆಗೆ ಬೀಜ ದೊರೆಯುವ ನಿರೀಕ್ಷೆಯಿದೆ.



। ಡಾ.ಮಹಾಂತ ಶಿವಯೋಗಯ್ಯ ಕೆ.
ಪ್ರಧಾನ ವಿಜ್ಞಾನಿ (ತಳಿ ಅಭಿವೃದ್ಧಿ ಶಾಸ್ತ್ರ) ಮತ್ತು ಮುಖ್ಯಸ್ಥರು,ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆಯ ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ

ಸತುವಿನ ಕೊರತೆ ಆರೋಗ್ಯಕ್ಕೆ ಕಂಟಕ

ವೈದ್ಯಲೋಕದ ಸಂಶೋಧನೆಗಳ ಪ್ರಕಾರ ಸತು (ಜಿಂಕ್) ಕೊರತೆಯಿಂದ ಮಾನವನ ಆರೋಗ್ಯದಲ್ಲಿ ವಿವಿಧ ರೀತಿಯ ಸಮಸ್ಯೆ ಕಾಡುತ್ತಿವೆ. ಇದರಲ್ಲಿ ದೈಹಿಕ ಬೆಳವಣಿಗೆ, ಜೀರ್ಣಕ್ರಿಯೆಗೆ ತೊಂದರೆ, ಕೂದಲುದುರುವಿಕೆ, ಕಣ್ಣು ಮತ್ತು ಚರ್ಮದ ವ್ಯಾಧಿ, ಕಡಿಮೆ ತೂಕದ ಸಮಸ್ಯೆ, ಗಾಯದ ಮಾಯುವಿಕೆಯಲ್ಲಿ ವಿಳಂಬ, ಮಾನಸಿಕ ಆರೋಗ್ಯದ ಏರುಪೇರು, ಗರ್ಭಿಣಿಯರಲ್ಲಿ ಹಲವು ಕೊರತೆಗಳು ನೇರಿ ಹತ್ತು ಹಲವು ಆರೋಗ್ಯದ ಸಮಸ್ಯೆಗಳಿಗೆ ಜಿಂಕ್‌ನ ಕೊರತೆ ದಾರಿ ಮಾಡುತ್ತಿದೆ ಎಂಬುದು ಗೊತ್ತಾಗಿದೆ. ಇದಕ್ಕೆ ಪ್ರಮುಖವಾಗಿ ನಾವೆಲ್ಲರೂ ಸೇವಿಸುವ ಪ್ರಮುಖ ಆಹಾರ ಅನ್ನದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸತುವಿನ ಕೊರತೆಯಿರುವುದು ಕಾರಣ ಎಂಬುದು ಸಾಬೀತಾಗಿದೆ.

ಪಾಲಿಶ್ ಅಕ್ಕಿಯಲ್ಲಿ ಜಿಂಕ್ ಕೊರತೆ

ಸದ್ಯ ಪಾಲಿಶ್ ಮಾಡಿದಂತಹ ಅಕ್ಕಿಯನ್ನೇ ಪ್ರಮುಖವಾಗಿ ಅನ್ನ ತಯಾರಿಕೆಗೆ ಬಳಸಲಾಗುತ್ತಿದೆ. ಅದರಲ್ಲಿ ಸತುವಿನ ಅಂಶವು ಸರಾಸರಿ ಕಿಲೋಗ್ರಾಂಗೆ 12 ಮಿ.ಗ್ರಾಂ.ನಷ್ಟಿರುತ್ತದೆ. ಪ್ರತಿಯೊಬ್ಬರಿಗೆ ಆಹಾರದಲ್ಲಿ ಒಂದು ದಿನಕ್ಕೆ ಕನಿಷ್ಠ 12-15 ಮಿ.ಗ್ರಾಂ. ನಷ್ಟು ಜಿಂಕ್ ಪೋಷಕಾಂಶದ ಅವಶ್ಯಕತೆಯಿದೆ ಎಂಬುದು ವೈದ್ಯಲೋಕದ ಸಲಹೆ. ಜಿಂಕ್ ಪೋಷಕಾಂಶವು ಮನುಷ್ಯರ ಆರೋಗ್ಯದಲ್ಲಿ ಹೆಚ್ಚಿನ ಪ್ರಾಧಾನ್ಯತೆ ಹೊಂದಿರುವುದರಿಂದ ಸತತ 6 ವರ್ಷಗಳ ರಚನಾತ್ಮಕ ಸಂಶೋಧನೆ ನಿರಂತರ ಅಧ್ಯಯನ ನಡೆಸಿತು. ಅದರ ಪರಿಣಾಮವೇ ಮಾನವನ ಆರೋಗ್ಯಯುತ ಜೀವನಕ್ಕೆ ಅವಶ್ಯಕವಾಗಿರುವ ಸತು ಹೊಂದಿರುವ ಸ್ಫೂರ್ತಿ ಭತ್ತದ ತಳಿ ಜಿಎನ್‌ವಿ 1906 ತಳಿ ಹುಟ್ಟು ಸಾಧ್ಯವಾಗಿದೆ. ಈ ತಳಿಯನ್ನು 2023ರಲ್ಲಿ ರಾಷ್ಟ್ರ ಮಟ್ಟದಲ್ಲಿ ಕೇಂದ್ರದ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿ ಬಿಡುಗಡೆಗೆ ಅನುಮತಿಸಿದ್ದು, ಅದರಂತೆ ಪ್ರಾಯೋಗಿಕವಾಗಿ ಈ ತಳಿಯನ್ನು ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಬೆಳೆಯಲು ಶಿಫಾರಸು ಮಾಡಲಾಗಿದೆ.

Times of Ind pg 13

MONDAY, JULY 14, 2025

Around The World In 26 Million Years

Evolution Of Eurema Species Is As Breathtaking As The Butterflies

Chethan.Kumar@timesofindia.com


E. nicevillei


E. candida


E. ada


E. senegalensis


E. blanda


E. laeta

They flutter past us with the quiet confidence of global citizens, their lemon-hued wings whispering tales of journeys longer than human history. But these delicate grass-yellow butterflies — often dismissed as common — are anything but ordinary.

An international team of biologists has pieced together the journey of 'Eurema' butterflies, revealing that these tropical fliers circled the globe in 26 million years. And they did it without air miles, sat-navs, or even a consistent body plan.

KEY FINDINGS

AMERICAN ORIGINS | Contrary to previous beliefs, Eurema butterflies originated in the Americas, not Asia or Africa, beginning their global spread 26 million years ago

ISLAND HOPPING | Islands served as crucial "evolutionary accelerators", allowing the butterflies to diversify rapidly and spread across continents

GENETIC DETECTIVE WORK | DNA analysis of 66 species revealed multiple intercontinental migrations, with butterflies travelling to Asia, Africa, Australasia and back again

HIDDEN DIVERSITY | The common butterfly Eurema hecabe turns out to be multiple "cryptic species" that look alike but are genetically distinct


E. lisa


E. lucina

TAXONOMY OVERHAUL | Research resolves centuries of confusion by unifying several genera under one name, Eurema, divided into just two subgenera


E. daira


E. reticulata

CLIMATE IMPLICATIONS | Study provides insights into how species adapt through migration—particularly relevant as climate change forces populations to relocate

LAST WEEK'S QUICK QUIZ

Question on June 23: The late Lalji Singh is known as the 'Father of Indian DNA fingerprinting'. But the former director of CCMB, Hyderabad, had another keen interest: Wildlife. What was the name of the conservation lab he helped set up?
Answer: LaCONES (Laboratory for the Conservation of Endangered Species)

Vijayavani pg 04

ನೆರೆಯ ರಾಜ್ಯಗಳಿಂದ ಮೆಲ್ಲಿಪೆರಾ ತಳಿ ಖರೀದಿಸದಂತೆ ಸೂಚನೆ | ಬೆಂ. ಕೃಷಿ ವಿವಿ ಅಧ್ಯಯನ

ಜೇನು ಕುಟುಂಬಗಳಿಗೆ ಸ್ಮಾಲ್ ಹೈವ್ ಕೀಟ ಕಂಟಕ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಥೈಸ್ಯಾಕ್ ಬ್ರೂಡ್ ವೈರಾಣು ರೋಗ ಹಾವಳಿಯಿಂದ ಬಳಲಿರುವ ರಾಜ್ಯದ ಜೇನು ಸಾಕಾಣಿಕೆ ಉದ್ಯಮಕ್ಕೆ 'ಸ್ಮಾಲ್ ಹೈವ್ ಬೀಟಲ್ 'ಎಂಬ ಹೊಸ ಕೀಟ ಕಂಟಕವಾಗಿ ಪರಿಣಮಿಸಿದೆ. ಇದರ ನಿವಾರಣೆಗಾಗಿ ನೆರೆರಾಜ್ಯಗಳಿಂದ ಮೆಲ್ಲಿಪೆರಾ ತಳಿ ಖರೀದಿಸದಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜೇನುಕೃಷಿಕರಿಗೆ ಸಲಹೆ ನೀಡಿದೆ.

ಇತ್ತೀಚೆಗೆ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಮೆಲ್ಲಿಪೆರಾ ತಳಿಯ ಜೇನು ಕುಟುಂಬಕ್ಕೆ ಸ್ಮಾಲ್ ಹೈವ್ ಬೀಟಲ್ ಕೀಟ ಕಂಡು ಬಂದಿದ್ದು 20,000ಕ್ಕೂ ಹೆಚ್ಚು ಜೇನು ಕುಟುಂಬಗಳು ನಾಶವಾಗಿವೆ. ಈ ಕೀಟದ ವ್ಯಾಪಕ ಹಾವಳಿ ಕುರಿತು ಬೆಂಗಳೂರು ಕೃಷಿ ವಿವಿಯ ಜೇನುಕೃಷಿ ವಿಜ್ಞಾನಿಗಳ ತಂಡವು ಒಂದು ವರ್ಷದ ಕಾಲ ವಿವಿಧ ಜಿಲ್ಲೆಗಳಲ್ಲಿ ಕಂಟಕ ಕೀಟಗಳ ಬಗ್ಗೆ ಸಮೀಕ್ಷೆ ನಡೆಸಿ ವರದಿ ನೀಡಿದೆ.

ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಮೆಲ್ಲಿಫೆರಾ ಮತ್ತು ತುಡುವೆ ಜೇನು ಕುಟುಂಬಗಳಲ್ಲಿ ಈ ಕಂಟಕ ಕೀಟ ಪತ್ತೆಯಾಗಿವೆ. ಮೈಸೂರು ಜಿಲ್ಲೆಯ 6 ಸ್ಥಳಗಳಲ್ಲಿ 480 ತುಡುವೆ ಜೇನು ಕುಟುಂಬಗಳನ್ನು ಪರೀಕ್ಷಿಸಿದಾಗ ಶೇ.58.33 ಕೀಟಬಾಧೆಯ



ಪ್ರಮಾಣವಿದ್ದು 280 ಜೇನು ಕುಟುಂಬಗಳು ಗೂಡು ಬಿಟ್ಟು ಪಲಾಯನವಾಗಿವೆ. ಈ ಕಂಟಕ ಕೀಟದ ಮರಿಹುಳುಗಳು ಜೇನು ಕುಟುಂಬಕ್ಕೆ ಹೆಚ್ಚು ಹಾನಿ ಮಾಡುತ್ತದೆ. ಜೇನುಗೂಡುಗಳಲ್ಲಿ ಪರಾಗ, ಜೇನುತುಪ್ಪ ಮತ್ತು ಸತ್ತ ಜೇನುನೊಣಗಳನ್ನು ತಿನ್ನುತ್ತಾ ಜೀವಿಸುವ ಸಣ್ಣ ಕಂದು-ಕಪ್ಪು ಬಣ್ಣದ ಜೀರುಂಡೆಯಾಗಿದೆ. ಮರಿಹುಳು ಹಂತವು ಎರಿಗಳಲ್ಲಿನ ಜೇನುತುಪ್ಪ ಮತ್ತು ಪರಾಗ ತಿನ್ನುವ ಮೂಲಕ ಸಕ್ರಿಯವಾಗಿ ಜೇನುಗೂಡುಗಳಿಗೆ ಹೆಚ್ಚಿನ ಹಾನಿ ಉಂಟುಮಾಡುತ್ತದೆ. ಜೇನುಗೂಡಿನ ಎರಿಗಳಲ್ಲಿ ಮರಿ ಹುಳುಗಳು ಮಲವಿಸರ್ಜನೆ ಮಾಡುವುದರಿಂದ ಜೇನುತುಪ್ಪದ ಬಣ್ಣ ಕಂದು ಬಣ್ಣಕ್ಕೆ ತಿರುಗುತ್ತದೆ ಮತ್ತು ಹುಳಿಯಾಗುವಿಕೆಗೆ ಕಾರಣವಾಗುತ್ತವೆ ಎಂದು ವಿವಿ ತಿಳಿಸಿದೆ.

ಮೆಲ್ಲಿಪೆರಾ ತಳಿ ಖರೀದಿ ನಿಲ್ಲಿಸಲು ಸೂಚನೆ

ರೈತರು ಜೇನುನೊಣಗಳ ಕುಟುಂಬಗಳಲ್ಲಿ ಸ್ಮಾಲ್ ಹೈವ್ ಬೀಟಲ್ ಬಾಧೆಯ ಕುರಿತು ಪರಿಶೀಲನೆ ಮಾಡಿ ಕ್ವಾರಂಟೈನ್ ಕ್ರಮ ಜಾರಿಗೊಳಿಸಿ ಸೋಂಕಿತ ಕುಟುಂಬಗಳ ವರ್ಗಾವಣೆ ನಿರ್ಬಂಧಿಸಬೇಕು. ಪಕ್ಕದ ರಾಜ್ಯಗಳಿಂದ ಸೋಂಕಿತ ಜೇನುನೊಣಗಳ ಕುಟುಂಬಗಳನ್ನು (ಮೆಲ್ಲಿಪೆರಾ) ಖರೀದಿ ನಿಲ್ಲಿಸಬೇಕು. ಎಲ್ಲ ಸೋಂಕಿತ ಜೇನುಗೂಡುಗಳನ್ನು ಸ್ವಚ್ಛಗೊಳಿಸುವುದು, ಸೋಂಕಿತ ಖಾಲಿ ಎರಿಗಳನ್ನು ಸುಟ್ಟು ಹಾಕುವುದು ಅಥವಾ ಅಗತ್ಯ ಇದ್ದಲ್ಲಿ ಪರಿಸರಸ್ನೇಹಿ ಕೀಟನಾಶಕ ಸಿಂಪಡಿಸುವುದರಿಂದ ಕೀಟ ಬಾಧೆಯನ್ನು ಹತೋಟಿ ಮಾಡಬಹುದು ಎಂದು ಜೇನು ಕೃಷಿ ವಿಜ್ಞಾನಿಗಳು ತಿಳಿಸಿದ್ದಾರೆ.

14 ತಿಂಗಳ ಕನಿಷ್ಠಕ್ಕೆ ಇಳಿದ ರೊಬಸ್ಟಾ ಕಾಫಿ ದರ

ಬ್ರೆಜಿಲ್‌ನಲ್ಲಿ ಕೊಯ್ಲು ಚುರುಕು ಕಾಫಿ ಧಾರಣೆಯಲ್ಲಿ ಇಳಿಕೆ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು): ಬ್ರೆಜಿಲ್‌ನಲ್ಲಿ ಕಾಫಿ ಕೊಯ್ಲು ಶುರುವಾದ ನಂತರ ಮಾರುಕಟ್ಟೆಗೆ ಕಾಫಿ ಆವಕ ಹೆಚ್ಚಾಗಿದ್ದು, ಧಾರಣೆ ದಿನೇ ದಿನೇ ಕುಸಿಯುತ್ತಿದೆ.

ಶುಕ್ರವಾರ ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಟನ್ ಒಂದಕ್ಕೆ 3,170 ಡಾಲರ್ ಬೆಲೆ ಇತ್ತು. ಇದು 14 ತಿಂಗಳ ಕನಿಷ್ಠ. ಅರೇಬಿಕಾ ಕಾಫಿ ಪೌಂಡ್ ಒಂದಕ್ಕೆ 286 ಸೆಂಟ್ಸ್ ಮಟ್ಟಕ್ಕೆ ಕುಸಿದಿದೆ. ಇದು 8 ತಿಂಗಳ ಕನಿಷ್ಠ. ದೇಶಿ ಮಾರುಕಟ್ಟೆಯಲ್ಲಿ ಕಾಫಿ ಧಾರಣೆ ಶೇ 30ರಷ್ಟು ಕುಸಿದಿದೆ.

ಜಗತ್ತಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕಾಫಿ ಬೆಳೆಯುವ ಬ್ರೆಜಿಲ್ ದೇಶದಲ್ಲಿ ಕಾಫಿ ಕೊಯ್ಲು ಚುರುಕಾಗಿದೆ. ಶೇ 70ರಷ್ಟು ಕೊಯ್ಲು ಮುಗಿದಿದೆ.

ವಿಯೆಟ್ನಾಂ ದೇಶದಲ್ಲಿ ಈ ಸಾಲಿನ ರೊಬಸ್ಟಾ ಬೆಳೆ ಪ್ರಮಾಣ ಹೆಚ್ಚಬಹುದು ಎಂಬ ನಿರೀಕ್ಷೆಯೂ ಲಂಡನ್



ರೊಬಸ್ಟಾ ಕಾಫಿ

ಮಾರುಕಟ್ಟೆಯಲ್ಲಿ ರೊಬಸ್ಟಾ ಬೆಲೆ ಇಳಿಕೆಗೆ ಕಾರಣವಾಗಿದೆ.

ಯುಎಸ್‌ಡಿಎ ಸಂಸ್ಥೆ ತನ್ನ 2025- 26ನೇ ಸಾಲಿನ ಕಾಫಿ ಫಸಲಿನ ಅಂದಾಜನ್ನು ಪ್ರಕಟಿಸಿದೆ. ಅದರ ಪ್ರಕಾರ ಜಾಗತಿಕ ಕಾಫಿ ಉತ್ಪಾದನೆ ಮುಂದಿನ ಸಾಲಿಗೆ ಶೇ 2.5ರಷ್ಟು ಹೆಚ್ಚಿ 1.78 ಕೋಟಿ ಚೀಲ ತಲುಪಬಹುದು. ಈ ಪೈಕಿ ಅರೇಬಿಕಾ ಶೇ 1.7 ಕಡಿಮೆಯಾದರೆ ರೊಬಸ್ಟಾ ಶೇ 7ರಷ್ಟು ಹೆಚ್ಚಬಹುದು ಎಂದು ಆ ಸಂಸ್ಥೆ ಅಂದಾಜಿಸಿದೆ.

ಕುಸಿಯುತ್ತಿರುವ ಕಾಫಿ ಬೆಲೆಯ ಬಗ್ಗೆ ಬೆಳೆಗಾರ ಮತ್ತು ಮಾರುಕಟ್ಟೆ ವಿಶ್ಲೇಷಕ ಗೌತಹಳ್ಳಿ ಕರಣ್, 'ಜಾಗತಿಕ ಅರೇಬಿಕಾ ಫಸಲಿನ ಆಧಾರದ ಮೇಲೆ ರೊಬಸ್ಟಾ ಬೆಲೆ ಏರುಪೇರು ಆಗಬಹುದು. ಅರೇಬಿಕಾ ಫಸಲು ನಿರೀಕ್ಷೆಗಿಂತ ಕಡಿಮೆಯಾದರೆ ಮುಂದಿನ ದಿನಗಳಲ್ಲಿ ರೊಬಸ್ಟಾ ಧಾರಣೆ ಹೆಚ್ಚಬಹುದು' ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ಕಾಫಿ ಉದ್ಯಮದ ಜಾಗತಿಕ ಸಂಸ್ಥೆ ವೋಲ್‌ಕೆಫೇ ಕೂಡ 2025- 26ನೇ ಸಾಲಿನಲ್ಲಿ ಅರೇಬಿಕಾ ಕಾಫಿ ಉತ್ಪಾದನೆ 90 ಲಕ್ಷ ಚೀಲದಷ್ಟು ಕಡಿಮೆ ಆಗಬಹುದು ಎಂದು ಅಂದಾಜಿಸಿದೆ.

ಇತ್ತ ಬಹುತೇಕ ಬೆಳೆಗಾರರು ಗರಿಷ್ಠ ಧಾರಣೆಯ ನಿರೀಕ್ಷೆಯಿಂದ ಕಾಫಿ ದಾಸ್ತಾನು ಮಾಡಿದ್ದರು. ಇದೀಗ ಶೇ 30ರಷ್ಟು ದರ ಕುಸಿದಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ. ಮಳೆಯಿಂದಾಗಿ ಈ ಬಾರಿ ಫಸಲು ಕೂಡ ನೆಲಕಚ್ಚುತ್ತಿದೆ. ಇದು ಕೂಡ ಬೆಳೆಗಾರರಿಗೆ ತಲೆ ನೋವು ತಂದಿದೆ.

ಕೃಷಿ ಉದ್ಯಮ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

• **ಸೂಲಿಬೆಲೆ:** ಹೋಬಳಿಯ ಸೊಣ್ಣಹಳ್ಳಿಪುರ ಗ್ರಾಮದ ಕೆನರಾ ಬ್ಯಾಂಕ್ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನಿರುದ್ಯೋಗಿ ಮಹಿಳೆಯರು ಮತ್ತು ಪರುಷರಿಗಾಗಿ 13 ದಿನಗಳ ಉಚಿತ ಕೃಷಿ ಉದ್ಯಮ(ಕುರಿ,ಮೇಕೆ,ಸಾಕಾಣಿಕೆ) ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಅಂಬರೀಷ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರಾಜ್ಯದ ಯಾವುದೇ ಜಿಲ್ಲೆಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ 18 ವರ್ಷ ಮೇಲ್ಪಟ್ಟು 45 ವರ್ಷದೊಳಗಿನವರು ಜು.19 ರಂದು ಶನಿವಾರ ಬೆಳಗ್ಗೆ 10.30 ರಿಂದ ನೆಡೆಯುವ ನೇರ ಸಂದರ್ಶನದಲ್ಲಿ ಹಾಜರಾಗಲು ಕೋರಿದೆ. ಗ್ರಾಮೀಣ ಭಾಗದ ಬಿಪಿಎಲ್ ಪಡಿತರ ಚೀಟಿ ಹೊಂದಿರುವವರಿಗೆ ಅದ್ಯತೆ ನೀಡಲಾಗುತ್ತದೆ, 35 ಜನರಿಗೆ ಮಾತ್ರ ಅವಕಾಶವಿದೆ. ಉಚಿತ ಊಟ,ವಸತಿ ವ್ಯವಸ್ಥೆ ಇದ್ದು ಹೆಚ್ಚಿನ ಮಾಹಿತಿಗಾಗಿ ದೂ. 8970476050/8660038694 ಸಂಪರ್ಕಿಸಲು ಕೋರಿದೆ.

Hosadiganta
Pg 08

ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಿ: ಸಚಿವ ಕೃಷ್ಣಬೈರೇಗೌಡ

ಪರಿಸರ ನಾಶದಿಂದ ಹಲವು ವೈಪರೀತ್ಯ: ಸಚಿವ | ಕೃಷಿ ವಿವಿಯಲ್ಲಿ ಸಸ್ಯಸಂತೆ ಸಮಾರೋಪ

■ ಉದಯವಾಣಿ ಸಮಾಚಾರ



ಚಿಂಗಳೂರು: ಮನುಷ್ಯನ ದುರಾಸೆಯಿಂದ ಪರಿಸರ ವಿನಾಶದತ್ತ ಸಾಗುತ್ತಿದ್ದು, ಹಲವು ವ್ಯಾಕ್ಯಕ ವಿಕೋಪಗಳಿಗೆ ಕಾರಣವಾಗುತ್ತಿದೆ. ಭವಿಷ್ಯದ ಪೀಳಿಗೆಗಾಗಿ ನಾವುಗಳು ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಜಿಕೆವಿಕೆಯಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ ಹಾಗೂ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕಾ ಮಹಾವಿದ್ಯಾಲಯ ಚಿಂಗಳೂರು ಸಹಯೋಗದಲ್ಲಿ ಭಾನುವಾರ ಏರ್ಪಡಿಸಿದ್ದ ಪರಿಸರ ದಿನಾಚರಣೆ ಹಾಗೂ 'ಸಸ್ಯಸಂತೆ' ಸಮಾರೋಪದಲ್ಲಿ ಅವರು ಮಾತನಾಡಿದರು.

ಮನುಷ್ಯನ ಅವಶ್ಯಕತೆಗಳನ್ನು ಪೂರೈಸಲು ಪರಿಸರಕ್ಕೆ ಯಾವುದೇ ಕೊರತೆ ಇಲ್ಲ. ಆದರೆ, ದುರಾಸೆಯ ಜೊತೆಗೆ ಪರಿಸರಕ್ಕೆ ಮಾರಕವಾಗುವ ವಸ್ತುಗಳ ಅತಿಯಾದ ಬಳಕೆ ಪರಿಣಾಮ ಪರಿಸರ ನಾಶವಾಗುತ್ತಿದೆ. ಪರಿಸರದ ಉಳಿವು ಎಂದರೆ ಕೇವಲ ಗಿಡ ನೆಡುವುದಲ್ಲ ಬದಲಾಗಿ ಪ್ರತಿಯೊಬ್ಬರ ಮನಸ್ಸಿನಲ್ಲಿ ಪರಿಸರ ಕಾಳಜಿ, ಪ್ರಜ್ಞೆ ಬೆಳೆಸಿಕೊಂಡು ಕಿಂಚಿತ್ತಾದರೂ ಕೊಡುಗೆ ನೀಡಬೇಕು ಎಂದರು.

ಪರಿಸರ ನಾಶದ ಪರಿಣಾಮದಿಂದ ಜಗತ್ತಿನಲ್ಲಿ ಈಗಾಗಲೇ ಭೂಕುಸಿತ, ಪ್ರವಾಹ, ಭೂಕಂಪನ ಮತ್ತಿತರ ಪ್ರಾಕೃತಿಕ ವಿಕೋಪಗಳು ಸಂಭವಿಸುತ್ತಿವೆ. ಭವಿಷ್ಯದ ಪೀಳಿಗೆ ಹಿತದೃಷ್ಟಿಯಿಂದ ನಾವುಗಳು ಪರಿಸರ ಸಂರಕ್ಷಣೆಗೆ ಮುಂದಾಗಬೇಕಿದೆ. ಈ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆ ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸುವ ಕೆಲಸಕ್ಕೆ ಮುಂದಾಗಿದೆ ಎಂದು ಹೇಳಿದರು.

ಸಸ್ಯ ಸಂತೆಯಲ್ಲಿ ವಿವಿಧ ಬಗೆಯ ಹಣ್ಣುಗಳು, ಕಸಿ ಗಿಡಗಳು, ಹೂ ಮತ್ತು ಅಲಂಕಾರಿಕ ಗಿಡಗಳು, ತರಕಾರಿ ಹಾಗೂ ಹೂವಿನ ಬೀಜಗಳು, ಏರಿಗೊಬ್ಬರ, ಜೈವಿಕ ಪೀಡೆನಾಶಕ, ಮೌಲ್ಯವರ್ಧಿತ ಸಾವಯವ ಉತ್ಪನ್ನಗಳು ಸೇರಿದಂತೆ 100 ಕ್ಕಿಂತ ಹೆಚ್ಚು ಮಳಿಗೆಗಳಲ್ಲಿ ವಿವಿಧ ಬೆಳಗಳ ಪ್ರಾತ್ಯಕ್ಷಿಕೆ ಹಾಗೂ ಮಾರಾಟವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಡಾ.ಜಿ.ಎಸ್.ಕೆ. ಸ್ವಾಮಿ, ಆರ್. ಕೆ. ಮೇಸ್ತ, ರೈತ ಉತ್ಪಾದಕ ಸಂಸ್ಥೆಗಳ ಉತ್ಪತ್ತಿ ಕೇಂದ್ರ ನಿರ್ದೇಶಕ ಜಿ. ಕೆ. ನೀತಾರಾಮು, ಜಗದೀಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

Viayavani
Pg 01

ನಕಲಿ ರಸಗೊಬ್ಬರ ವಿರುದ್ಧ ಕಠಿಣ ಕ್ರಮ

ರಾಜ್ಯ ಸರ್ಕಾರಗಳಿಗೆ ಕೇಂದ್ರ ಕೃಷಿ ಸಚಿವ ಚೌಹಾಣ್ ಸೂಚನೆ

ನವದೆಹಲಿ: ನಕಲಿ ಮತ್ತು ಕಳಪೆ ಗುಣಮಟ್ಟದ ರಸಗೊಬ್ಬರಗಳ ಮಾರಾಟದ ವಿರುದ್ಧ ತ್ವರಿತ ಮತ್ತು ಕಠಿಣ ಕ್ರಮ ಕೈಗೊಳ್ಳುವಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭಾನುವಾರ ಸೂಚನೆ ನೀಡಿದ್ದಾರೆ. ಈ ಕುರಿತು ಅವರು ಎಲ್ಲ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.



ರಸಗೊಬ್ಬರ ಉತ್ಪಾದನೆ ಮತ್ತು ಮಾರಾಟವನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು. ನಕಲಿ ಮತ್ತು ಕಳಪೆ ಗುಣಮಟ್ಟದ ಉತ್ಪನ್ನಗಳ ಮಾದರಿ ಸಂಗ್ರಹಿಸಿ ಪರೀಕ್ಷೆ ನಡೆಸಬೇಕು. ನ್ಯಾನೋ ರಸಗೊಬ್ಬರಗಳು ಅಥವಾ ಜೈವಿಕ ಉತ್ತೇಜಕ ಉತ್ಪನ್ನಗಳನ್ನು ಸಾಂಪ್ರದಾಯಿಕ ರಸಗೊಬ್ಬರಗಳ ಜೊತೆಗೆ ಬಲವಂತವಾಗಿ ಟ್ಯಾಗ್ ಮಾಡುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ತಪ್ಪಿತಸ್ಥ ಕಂಪನಿಗಳು ಮತ್ತು ಮಾರಾಟಗಾರರ ವಿರುದ್ಧ ಕೂಡಲೇ ಎಫ್‌ಐಆರ್‌ಗಳ ದಾಖಲಿಸಿ ಪರವಾನಗಿ ರದ್ದತಿ ಮತ್ತಿತರ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಅವರಿಗೆ ಶಿಕ್ಷೆ ಆಗುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದಿದ್ದಾರೆ.

ಸ್ಥಳೀಯ ರೈತರ ಗುಂಪುಗಳನ್ನು ರಚಿಸಿ ಒರಿಜಿನಲ್ ಮತ್ತು ನಕಲಿ ಉತ್ಪನ್ನಗಳನ್ನು ಗುರುತಿಸುವ ಬಗ್ಗೆ ಶಿಕ್ಷಣ ನೀಡಬೇಕು. ನಕಲಿ ಉತ್ಪನ್ನಗಳು ಗಮನಕ್ಕೆ ಬಂದೊಡನೆ ರೈತರು ಸರ್ಕಾರಕ್ಕೆ ಮಾಹಿತಿ ನೀಡುವಂತಹ ವ್ಯವಸ್ಥೆ ರೂಪಿಸಬೇಕು. ಇದಕ್ಕಾಗಿ ರಾಜ್ಯವ್ಯಾಪಿ ಅಭಿಯಾನ ಪ್ರಾರಂಭಿಸಬೇಕು ಎಂದು ಹೇಳಿದ್ದಾರೆ. ರೈತರಿಗೆ ಸರಿಯಾದ ಸಮಯಕ್ಕೆ ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ರಸಗೊಬ್ಬರ ಒದಗಿಸುವ ಅವಶ್ಯಕತೆ ಇದೆ. ನಕಲಿ, ಕಳಪೆ ಗುಣಮಟ್ಟದ ರಸಗೊಬ್ಬರಗಳ ಮಾರಾಟವನ್ನು 1985ರ ರಸಗೊಬ್ಬರ (ನಿಯಂತ್ರಣ) ಆದೇಶದಡಿ ನಿಷೇಧಿಸಲಾಗಿದೆ. ಇದು 1955ರ ಆಗತ್ಯ ವಸ್ತುಗಳ ಕಾಯ್ದೆಯಡಿಯಲ್ಲಿ ಬರುತ್ತದೆ ಎಂದು ಚೌಹಾಣ್ ವಿವರಿಸಿದ್ದಾರೆ.

Udayavani
Pg 03 & 04

ಬಾಹ್ಯಾಕಾಶದಲ್ಲಿ ಮೊಳಕೆಯೊಡೆದ ಮೆಂತ್ಯೆ ಶೀಘ್ರ ಧಾರವಾಡಕ್ಕೆ

ಕೃಷಿ ವಿವಿಯ ವಿಜ್ಞಾನಿ ಡಾ. ರವಿಕುಮಾರ ಹೊಸಮನಿ ನೇತೃತ್ವದ ತಂಡದಿಂದ ಅಧ್ಯಯನ | ಒಂದೂವರೆ ತಿಂಗಳಲ್ಲಿ ಇಸ್ರೋಗೆ ವರದಿ

■ ಅಮರೇಗೌಡ ಗೋನವಾರ

ಉದಯವಾಣಿ ಸಮಾಚಾರ

ಹುಬ್ಬಳ್ಳಿ: ಪ್ರಯೋಗ ಉದ್ದೇಶದೊಂದಿಗೆ ಬಾಹ್ಯಾಕಾಶಕ್ಕೆ ಕಳುಹಿಸಲಾಗಿದ್ದ ಹೆಸರು ಹಾಗೂ ಮೆಂತ್ಯೆ ಸ್ಯಾಂಪಲ್‌ಗಳು ಮಾಸಾಂತ್ಯದೊಳಗೆ ಧಾರವಾಡ ಕೃಷಿ ವಿವಿ ತಲುಪುವ ಸಾಧ್ಯತೆಗಳಿದ್ದು, ಅಧ್ಯಯನ ನಡೆಸಿ ಒಂದೂವರೆ ತಿಂಗಳಲ್ಲಿ ಇಸ್ರೋಗೆ ವರದಿ ಸಲ್ಲಿಸಲಾಗುತ್ತದೆ ಎಂದು ತಿಳಿದುಬಂದಿದೆ.

ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು ಕೊಂಡೊಯ್ದಿದ್ದ ಈ ಹೆಸರು-ಮೆಂತ್ಯೆ ಬಾಹ್ಯಾಕಾಶ ಕೇಂದ್ರದಿಂದ ಅವರೊಂದಿಗೆ ಜು.15ರಂದು ಅಮೆರಿಕದ ನಾಸಾಕ್ಕೆ ಮರಳಲಿದೆ. ಅಲ್ಲಿಂದ 10 ದಿನದೊಳಗಾಗಿ ಸ್ಯಾಂಪಲ್‌ಗಳು ಕೃಷಿ ವಿವಿಗೆ ಬರಲಿದೆ. ಕೃಷಿ ವಿವಿಯ ವಿಜ್ಞಾನಿ ಡಾ। ರವಿಕುಮಾರ ಹೊಸಮನಿ ನೇತೃತ್ವದ ವಿಜ್ಞಾನಿಗಳ ತಂಡವು ಧಾರವಾಡ ಐಐಟಿ ಸಹಯೋಗದೊಂದಿಗೆ ಸಂಶೋಧನೆ ಕೈಗೊಂಡು ಬಾಹ್ಯಾಕಾಶಕ್ಕೆ ಹೆಸರು ಮತ್ತು ಮೆಂತ್ಯೆಯನ್ನು ಕಳುಹಿಸಿತ್ತು.

ಸಮಗ್ರ ಅಧ್ಯಯನ: ಭೂಮಿಯ ಗುರುತ್ವಾಕರ್ಷಣೆ ಇಲ್ಲದ ಬಾಹ್ಯಾಕಾಶದಲ್ಲಿ ಮೊಳಕೆ ಬಂದಿರುವ ಹೆಸರು ಮತ್ತು ಮೆಂತ್ಯೆಗಳ ಬಗ್ಗೆ ಸಮಗ್ರ ಅಧ್ಯಯನ ನಡೆಯಲಿದೆ. ಮೊಳಕೆ ನಿರೀಕ್ಷಿತ ಪ್ರಮಾಣದಲ್ಲಿ ಬೆಳವಣಿಗೆ ಕಂಡಿದೆಯೋ ಹೇಗೆ, ಮೊಳಕೆಯಲ್ಲಿನ ಪೋಷಕಾಂಶ, ಜೀನ್ಸ್, ಅಣುಗಳು ಇನ್ನಿತರ ಅಂಶಗಳು ಸರಿಯಾದ ಪ್ರಮಾಣದಲ್ಲಿವೆಯೇ, ಭೂಮಿ ಮೇಲೆ ಮೊಳಕೆ ಬರಿಸುವಿಕೆ, ಬಾಹ್ಯಾಕಾಶದಲ್ಲಿ ಮೊಳಕೆ ಬರಿಸುವಿಕೆಯಲ್ಲಿ ಏನಾದರೂ ಬದಲಾವಣೆ ಆಗಿದೆಯೇ, ಆಗಿದ್ದರೆ ಆ ಬದಲಾವಣೆ ಒಳ್ಳೆಯದೋ ಅಥವಾ ಕೆಟ್ಟದ್ದೋ? ಪೋಷಕಾಂಶಗಳು ಅಧಿಕವಾಗಿವೆಯೋ ಅಥವಾ ಕುಂಠಿತವಾಗಿವೆಯೇ? ಅವುಗಳ ಸೇವನೆಯಿಂದ ಮನುಷ್ಯರ ಆರೋಗ್ಯದ ಮೇಲೆ ಏನಾದರೂ ಪರಿಣಾಮ ಬೀರಬಹುದೇ ಎಂಬುದರ ಅಧ್ಯಯನ ನಡೆಯಲಿದೆ.

ಮೆಂತ್ಯೆ ಭಾರತೀಯರ ಪಾಲಿಗೆ ಅಡುಗೆ ಪದಾರ್ಥವಷ್ಟೇ ಅಲ್ಲದೆ ಔಷಧೀಯ ಗುಣವುಳ್ಳದ್ದಾಗಿದೆ. ಮೆಂತ್ಯೆ ಮಧುಮೇಹ ನಿಯಂತ್ರಣ, ಮೂಳೆಗಳ ಸಾಂದ್ರತೆ, ಹೃದಯ ಕಾಯಿಲೆ ಇನ್ನಿತರವುಗಳಿಗೆ ಬಳಕೆ ಆಗುತ್ತಿದೆ. ಆದನ್ನು ಔಷಧ ರೂಪದಲ್ಲಿ ಹೇಗೆ ಬಳಸಬಹುದು ಎಂಬುದರ ಬಗ್ಗೆಯೂ ಚಿಂತನೆಗಳು ನಡೆದಿದ್ದು, ಬಾಹ್ಯಾಕಾಶದಲ್ಲಿ ಮೊಳಕೆಯೊಡೆದ ಮೆಂತ್ಯೆಯ ಅಧ್ಯಯನದಲ್ಲಿ ಈ ಅಂಶದ ನಿಟ್ಟಿನಲ್ಲಿಯೂ ಅಧ್ಯಯನ ನಡೆಯಲಿದೆ ಎನ್ನಲಾಗಿದೆ.

ಹೆಸರುಕಾಳಿಗಿಂತ ಮೆಂತ್ಯೆ ಮೊಳಕೆ ಮೊದಲು

ಭೂಮಿ ಮೇಲಿನ ಮೊಳಕೆ-ಸಸಿಗಳ ಬಗೆಗಿನ ಅಧ್ಯಯನಕ್ಕೂ, ಬಾಹ್ಯಾಕಾಶದಲ್ಲಿ ಮೊಳಕೆ ಬರಿಸುವಿಕೆಗೂ ಸಾಕಷ್ಟು ವ್ಯತ್ಯಾಸವಿದೆ. ಭೂಮಿಯಲ್ಲಿನ ಕಾಳುಗಳ ಮೊಳಕೆ ಬಗ್ಗೆ ನಿರೀಕ್ಷಿತ ರೀತಿಯಲ್ಲಿ ವ್ಯಾಖ್ಯಾನ ಹಾಗೂ ಹೆಚ್ಚು ಹತ್ತಿರದ ಫಲಿತಾಂಶ ಕಾಣಬಹುದಾಗಿದೆ. ಆದರೆ, ಬಾಹ್ಯಾಕಾಶದಲ್ಲಿ ಮೊಳಕೆ, ಬೆಳವಣಿಗೆ ಬಗ್ಗೆ ನಿರೀಕ್ಷೆ ಹುಸಿಯಾಗುವ ಇಲ್ಲವೆ ಉಲ್ಟಾ ಆಗುವ ಸಾಧ್ಯತೆಯೂ ಇರುತ್ತದೆ ಎಂಬುದು ಕೃಷಿ ವಿಜ್ಞಾನಿ ಮೂಲಗಳ ಅನಿಸಿಕೆ.

ಆಕ್ಸಿಯಂ-4 ನೌಕೆಯಲ್ಲಿ ಬಾಹ್ಯಾಕಾಶಕ್ಕೆ ತೆಗೆದುಕೊಂಡು ಹೋಗಿರುವ ಹೆಸರು ಹಾಗೂ ಮೆಂತ್ಯೆ ಕಾಳುಗಳು ಮೊಳಕೆ ಬಂದಿವೆ. ಆದರೆ, ವಿಜ್ಞಾನಿಗಳ ನಿರೀಕ್ಷೆಗಿಂತ ಭಿನ್ನವಾಗಿದೆ. ಭೂಮಿಯಲ್ಲಿ ಹೆಸರು ಮೊಳಕೆ ಬೇಗ ಬಂದರೆ ಮೆಂತ್ಯೆ ತಡವಾಗಿ ಬರುತ್ತದೆ. ಆದರೆ ಬಾಹ್ಯಾಕಾಶದಲ್ಲಿ ಹೆಸರಿಗಿಂತ ಮೆಂತ್ಯೆ ಕಾಳಿನ ಮೊಳಕೆ ಬೇಗ ಬಂದಿದೆ. ಜತೆಗೆ ಮೈಕ್ರೋ ಗ್ರಾವಿಟಿ ಅಧ್ಯಯನ ವಿಜ್ಞಾನಿಗಳಿಗೆ ದೊಡ್ಡ ಸವಾಲಾಗಲಿದೆ ಎಂದು ಹೇಳಲಾಗುತ್ತಿದೆ.

ಕೊಪ್ಪಳದಲ್ಲಿ ಕೈ ಹಿಡಿದ ತೋಟಗಾರಿಕೆ ಇಲಾಖೆ ಯೋಜನೆ । ಎಕರೆಗೆ 2 ಲಕ್ಷ ರೂ.ವರೆಗೆ ಲಾಭ

ಮಾವು ಬೆಳೆಗಾರರಿಗಿಲ್ಲ ದರ ಏರಿಳಿತದ ವರಿ!

■ ಶ್ರೀಕಾಂತ ಅಕ್ಕಿ ಕೊಪ್ಪಳ
shreekanth.akki@timesofindia.com

ರಾಜ್ಯದ ನಾನಾಕಡೆ ಮಾವು ಬೆಳೆದ ರೈತರು ಬೆಲೆ ಏರಿಳಿತದಿಂದ ಕಂಗಾಲಾಗಿದ್ದರೆ, ಜಿಲ್ಲೆಯ ರೈತರಿಗೆ ಬೆಲೆ ಏರಿಳಿತದ ಬಿಸಿ ತಟ್ಟಿಲ್ಲ. ಇದಕ್ಕೆ ಕಾರಣ ಜಿಲ್ಲಾ ತೋಟಗಾರಿಕೆ ಇಲಾಖೆ ರೂಪಿಸಿದ ಯೋಜನೆ. ಮಾವು ಬೆಳೆದ ರೈತರು ಇದರಿಂದ ಕೈತುಂಬಾ ಕಾಸು ಪಡೆಯುತ್ತಿದ್ದಾರೆ.

ಜಿಲ್ಲೆಯಲ್ಲಿ 4 ಸಾವಿರ ಎಕರೆ ಪ್ರದೇಶದಲ್ಲಿ ಮಾವು ಬೆಳೆಯಲಾಗಿದೆ. ಪ್ರತಿ ವರ್ಷ 45 ಸಾವಿರ ಮೆಟ್ರಿಕ್ ಟನ್‌ಗಿಂತ ಹೆಚ್ಚು ಉತ್ಪನ್ನ ದೊರಕುತ್ತದೆ. ಬೆನೆಶಾನ್, ದಶೇರಿ, ತೋತಾಪುರಿ, ರಸಪುರಿ, ಸ್ವರ್ಣರೇಖಾ, ಮಲ್ಲಿಕಾ, ಆಪೂಸು ಸೇರಿ ನಾನಾ ತಳಿಯ ಮಾವು ಬೆಳೆಯಲಾಗಿದೆ.

ಏನಿದು ಯೋಜನೆ?: ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಕೃಷ್ಣ ಉಕ್ಕುಂದ ಅವರು, ಭಜಂತ್ರಿ ಸಮುದಾಯದವರನ್ನು ಜಿಲ್ಲೆಯ ಮಾವು ಬೆಳೆಗಾರರಿಗೆ ಕೆಲ ವರ್ಷಗಳ ಹಿಂದೆ ಪರಿಚಯಿಸಿದ್ದರು. ಮಾವಿನ ಹಣ್ಣಿನ ಬೆಲೆ ಏರಿಳಿತದ ಆತಂಕವಿರುವ ರೈತರಿಗೆ ಲೀಸ್‌ಗೆ ತೋಟ ಕೊಡಲು ಸಲಹೆ ನೀಡಿದ್ದರು. ಆದರಂತೆ, ಜಿಲ್ಲೆಯ ಶೇ.90ರಷ್ಟು ತೋಟಗಾರಿಕೆ ಪ್ರದೇಶದ ಮಾವು ಬೆಳೆಗಾರರು ಮಾವು ಗುತ್ತಿಗೆ ನೀಡಿದ್ದಾರೆ. ಪ್ರಸ್ತುತ ಎಕರೆಗೆ 1.5 ರೂ. ಲಕ್ಷದಿಂದ 2ಲಕ್ಷ ರೂ.ವರೆಗೆ ಆದಾಯ ಪಡೆಯುತ್ತಿದ್ದಾರೆ.



ಮಾವಿನ ದರದ ಏರಿಳಿತ ಜಿಲ್ಲೆಯ ರೈತರನ್ನು ಅಷ್ಟಾಗಿ ಬಾಧಿಸಿಲ್ಲ. ನಮ್ಮ ಭಾಗದಲ್ಲಿ ಭಜಂತ್ರಿ ಸಮುದಾಯದವರು ಲೀಸ್ ಪಡೆಯುತ್ತಿರುವುದರಿಂದ ರೈತರಿಗೆ ದರದ ಪರಿಣಾಮ ನೇರವಾಗಿ ತಲುಪಿಲ್ಲ, ವಾರ್ಷಿಕ ಆದಾಯದ ಭಾಗವಾಗಿ ಅವರಿಗೆ ಹಣ ಬರುತ್ತಿದೆ.
-ಕೃಷ್ಣ ಉಕ್ಕುಂದ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೊಪ್ಪಳ

ಫಸಲಿಗೂ ಮುನ್ನ ಒಡಂಬಡಿಕೆ: ''ಮಾವಿನ ಫಸಲು ಬರುವುದಕ್ಕೆ ಮುನ್ನವೇ ರೈತರೊಂದಿಗೆ ಈ ಒಡಂಬಂಡಿಕೆ ನಡೆಯುತ್ತದೆ. ಆಂಧ್ರಪ್ರದೇಶ ಹಾಗೂ ಸ್ಥಳೀಯವಾಗಿರುವ ಭಜಂತ್ರಿ ಸಮುದಾಯದವರು ಅವಧಿಗೂ ಮುನ್ನ ನಮ್ಮ ಹೊಲಗಳಲ್ಲಿ ಟೆಂಟ್ ಹಾಕಿ, ನಿಗದಿಪಡಿಸಿದ ಹಣ ಕೊಟ್ಟು ಮಾವಿನ ಫಸಲು ತಾವು ತೆಗೆದುಕೊಂಡು ಮಾರಾಟ ಮಾಡುತ್ತಾರೆ. ಹೀಗಾಗಿ ನಮಗೆ ಬೆಲೆ ಏರಿಳಿಕೆಯ ಬಿಸಿ ತಟ್ಟುತ್ತಿಲ್ಲ,'' ಎಂದು ತಾಲೂಕಿನ ಕೂಕನಪಳ್ಳಿ ಗ್ರಾಮದ ರೈತ ಈರಣ್ಣ ಖುಷಿಯಿಂದಲೇ ಹೇಳಿದರು.

ನೆರೆ ಜಿಲ್ಲೆಗಳ ರೈತರಿಗೆ ಫಜೀತಿ: ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ -ಗ್ರಾಮಾಂತರ, ರಾಮನಗರ, ತುಮಕೂರು, ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಹಾವೇರಿ, ಬೀದರ್, ಕೊಪ್ಪಳ, ಬಾಗಲಕೋಟೆ, ಚಿತ್ರದುರ್ಗ, ರಾಣೆಬೆನ್ನೂರು ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ಮಾವು ಬೆಳೆಯಲಾಗುತ್ತದೆ. ಹವಾಮಾನ ವೈಪರೀತ್ಯ ಸೇರಿ ನಾನಾ ಕಾರಣದಿಂದ ಪ್ರಸ್ತುತ ಕೆ.ಜಿ. ಮಾವಿಗೆ 20ರಿಂದ 30ರೂ. ದರವಿದೆ. ಕೋಲಾರ, ಶ್ರೀನಿವಾಸಪುರ, ಚಿಂತಾಮಣಿ ಸೇರಿ ರಾಜ್ಯದ ಗಡಿ ಪ್ರದೇಶದಲ್ಲಿ ವ್ಯಾಪಕವಾಗಿ ತೋತಾಪುರಿ ಮಾವು ಬೆಳೆಯಲಾಗುತ್ತದೆ. ಈ ಭಾಗದ ರೈತರಿಗೆ ಆಂಧ್ರಪ್ರದೇಶದ ಚಿತ್ತೂರು ಮಾರುಕಟ್ಟೆಯೇ ಪ್ರಮುಖ ವಾಣಿಜ್ಯ ಕೇಂದ್ರ. ಆದರೆ, ಅನ್ಯ ರಾಜ್ಯಗಳಿಂದ ಚಿತ್ತೂರು ಮಾರುಕಟ್ಟೆಗೆ ಬರುವ ಮಾವಿಗೆ ಆಂಧ್ರಪ್ರದೇಶ ಸರಕಾರ ನಿಷೇಧ ಹೇರಿದ ಪರಿಣಾಮ ಸಮಸ್ಯೆಯಾಗಿತ್ತು. ಹೀಗಾಗಿ ಮಾವಿನ ಬೆಲೆ ಪಾತಾಳಕ್ಕೆ ಕುಸಿದಿತ್ತು.

ಮಿದ್ದು ರಾಜ್ಯ ಸರಕಾರವೇ ಆಂಧ್ರಪ್ರದೇಶದ ಸರಕಾರದ ಜತೆ ಮಾತುಕತೆ ನಡೆಸಿ, ಆಂಧ್ರದ ಈ ನಿರ್ಧಾರದಿಂದ ನೆರೆಯ ರಾಜ್ಯಗಳ ರೈತರಿಗೆ ತೊಂದರೆ ಉಂಟಾಗಲಿದೆ ಎಂದೂ ಹೇಳಿತ್ತು. ಆದರೂ, ಪರಿಹಾರ ಸಿಕ್ಕರಲಿಲ್ಲ, ಕೊನೆಗೆ ಕೇಂದ್ರ ಸರಕಾರ ಮಾವಿಗೆ ಬೆಂಬಲ ಬೆಲೆ ಘೋಷಿಸಿದ್ದರಿಂದ ಮಾವು ಬೆಳೆಗಾರರಿಗೆ ಸ್ವಲ್ಪ ಅನುಕೂಲವಾಗಿದೆ.

V-karanataka Pg 08

ಕೃಷಿ ಲಾಭಕ್ಕೆ 'ಬುದ್ಧಿಮತ್ತೆ'

ಜಾಗತಿಕ ಬೆಳೆ, ಬೆಲೆ ವಿಶ್ಲೇಷಣೆ ಆಧಾರದಲ್ಲಿ ಸ್ಥಳೀಯ ಬಿತ್ತನೆಯ ಮಾಹಿತಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೃಷಿಯನ್ನು ಲಾಭದಾಯಕ ಕ್ಷೇತ್ರವಾಗಿ ಅಭಿವೃದ್ಧಿಪಡಿಸಿ, ಇಳುವರಿ ಹೆಚ್ಚಳಕ್ಕೆ ನೆರವಾಗಲು ರಾಜ್ಯ ಸರ್ಕಾರ ಕೃತಕ ಬುದ್ಧಿಮತ್ತೆ ಆಧಾರಿತ ಕೃಷಿ ಸೇವಾ ಕೇಂದ್ರಗಳನ್ನು ಸ್ಥಾಪಿಸುತ್ತಿದೆ.

ಆಯಾ ಪ್ರದೇಶದ ಭೂ ವೈವಿಧ್ಯ, ಹವಾಗುಣ, ಮಣ್ಣಿನ ಮಾದರಿ, ತೇವಾಂಶ, ಮಳೆಯ ಪ್ರಮಾಣ, ಪ್ರಸ್ತುತ ಇರುವ ಬೆಳೆ ಪದ್ಧತಿ, ಪಡೆಯುತ್ತಿರುವ ಇಳುವರಿಗಳನ್ನು ಲೆಕ್ಕಹಾಕಿ ಜಾಗತಿಕ ಭೂ ನಕ್ಷೆ, ಕೇಂದ್ರೀಕೃತ ಡಿಜಿಟಲ್ ವೇದಿಕೆ ಸಿದ್ಧಪಡಿಸಲಾಗುತ್ತಿದೆ. ಇವುಗಳ ದತ್ತಾಂಶ ಬಳಸಿಕೊಂಡು ಕೃತಕ ಬುದ್ಧಿಮತ್ತೆ, ಯಾಂತ್ರಿಕ ಅಧ್ಯಯನ ತಂತ್ರಜ್ಞಾನದ ಆಧಾರದಲ್ಲಿ ರಾಜ್ಯದ ರೈತರು ಹಾಗೂ ಕೃಷಿ ನೀತಿ ನಿರೂಪಕರಿಗೆ ನೆರವು ನೀಡುವ ಸರ್ಕಾರ ಕಾರ್ಯಕ್ರಮ ರೂಪಿಸಿದೆ.

ಆಯಾ ವರ್ಷದ ಹವಾಮಾನ, ಮಳೆ, ಅತಿವೃಷ್ಟಿ, ಅನಾವೃಷ್ಟಿಯ ಆಧಾರದಲ್ಲಿ ಯಾವ ಋತುವಿನಲ್ಲಿ ಯಾವ ಬೆಳೆಗಳಿಗೆ ಬೇಡಿಕೆ ಇರುತ್ತದೆ. ಯಾವ ದೇಶದಲ್ಲಿ ಯಾವ ಬೆಳೆಯನ್ನು ಹೆಚ್ಚು ಬೆಳೆಯುತ್ತಾರೆ. ಅಲ್ಲಿನ ಹವಾಮಾನ ಸ್ಥಿತಿ ಹೇಗಿದೆ? ಪ್ರಾಕೃತಿಕ ವಿಕೋಪಗಳಿಗೆ ಸಿಲುಕಿ ಯಾವ ಪ್ರದೇಶಗಳಲ್ಲಿ ಬೆಳೆಯುವ ಬೆಳೆ ನಷ್ಟವಾಗಬಹುದು. ಯಾವ ಬೆಳೆಗಳಿಗೆ ದಿಢೀರ್ ಬೇಡಿಕೆ ಬರಬಹುದು. ಯಾವ ಬೆಳೆಗಳಿಂದ ಉತ್ತಮ ಬೆಲೆ ಸಿಗಬಹುದು ಎನ್ನುವುದರ ಆಧಾರದಲ್ಲಿ ಆಯಾ ಪ್ರದೇಶದ ರೈತರು ಯಾವ ಆಹಾರ-ವಾಣಿಜ್ಯ ಬೆಳೆಗಳನ್ನು ಬೆಳೆಯಬೇಕು ಎನ್ನುವ ಬೆಳೆ ಹಂಚಿಕೆಯ ಖಚಿತ ಮಾಹಿತಿಯನ್ನು ಈ ಕೃಷಿ ಸೇವಾ ಕೇಂದ್ರಗಳು ಒದಗಿಸಲಿವೆ.



ರಾಜ್ಯ ಸರ್ಕಾರ ಸ್ಥಾಪಿಸುತ್ತಿರುವ ಕೃತಕ ಬುದ್ಧಿಮತ್ತೆ ಆಧಾರಿತ ಡಿಜಿಟಲ್ ಸೇವಾ ಕೇಂದ್ರಗಳು ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿವೆ. ಭವಿಷ್ಯದಲ್ಲಿ ರೈತರಿಗೆ ವರದಾನವಾಗಲಿವೆ
ಶಾಲಿನಿ ರಜನೀಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ

ಮಡಗಾಸ್ಕರ್, ಇಂಡೋನೇಷ್ಯಾ, ಚೀನಾ, ಮೆಕ್ಸಿಕೊ ಮೊದಲಾದ ದೇಶಗಳು ವೆನಿಲಾ ಬೆಳೆಗೆ ಪ್ರಸಿದ್ಧಿ ಪಡೆದಿವೆ. ಕೆಲ ವರ್ಷಗಳ ಹಿಂದೆ ಅಲ್ಲಿ ಸಂಭವಿಸಿದ ಪ್ರಕೃತಿ ವಿಕೋಪಗಳಿಂದ ವೆನಿಲಾ ಬೆಲೆ ಗಗನಕ್ಕೇರಿತ್ತು.

4

ರಾಜ್ಯಮಟ್ಟದ ತಜ್ಞರ ಸಮಿತಿ ರಚನೆ

ತಂತ್ರಜ್ಞಾನ ಬಳಸಿಕೊಂಡು ಹೆಚ್ಚಿನ ಇಳುವರಿ ಪಡೆಯಲು, ಆಯಾ ಪ್ರದೇಶಕ್ಕೆ ಅನುಗುಣವಾಗಿ ಅಧಿಕ ಲಾಭ ತರುವ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳುವ ಕುರಿತು ನೆರವಾಗಲು ರಾಜ್ಯಮಟ್ಟದ ತಂತ್ರಜ್ಞರ ಸಮಿತಿ ರಚಿಸಲಾಗಿದೆ.

2025-26ನೇ ಸಾಲಿನ ಋತುಗಳಲ್ಲಿ ಭತ್ತದ ಬೆಳೆಯಲ್ಲಿ ತಂತ್ರಜ್ಞಾನದ ಮಾದರಿಯನ್ನು (ಎಸ್-ಟೆಕ್) ಅಳವಡಿಸಲು ಬಳ್ಳಾರಿ, ದಾವಣಗೆರೆ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ವಿಜಯನಗರ ಮತ್ತು ಯಾದಗಿರಿ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ.

Prajavani Pg 01

ಸಹಭಾಗಿ ಸಂಸ್ಥೆಗಳು

- ಕೃಷಿ ಇಲಾಖೆ
- ಸಿಬ್ಬಂದಿ ಮತ್ತು ಆಡಳಿತ
- ಸುಧಾರಣಾ ಇಲಾಖೆ
- ಪ್ರಾದೇಶಿಕ ದೂರ ಸಂವೇದಿ ಕೇಂದ್ರ
- ಕೃಷಿ ವಿಶ್ವವಿದ್ಯಾಲಯಗಳು
- ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ
- ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ
- ಆರ್ಥಿಕ ಮತ್ತು ಅಂಕಿಅಂಶಗಳ ಇಲಾಖೆ
- ಜಲಾನಯನ ಅಭಿವೃದ್ಧಿ ಇಲಾಖೆ
- ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ಕೀಟ, ರೋಗಗಳ ನಿವಾರಣೆ

ಇ-ಸ್ಯಾಪ್ ತಂತ್ರಾಂಶ (ಎಲೆಕ್ಟ್ರಾನಿಕ್ಸ್ ಪರಿಹಾರ) ಬಳಸಿ 52 ಕೃಷಿ ಬೆಳೆಗಳಲ್ಲಿ ಕಂಡು ಬರುವ 1,000ಕ್ಕೂ ಹೆಚ್ಚು ಕೀಟ, ರೋಗಗಳನ್ನು ನಿವಾರಣೆ ಮಾಡುವ ಕಾರ್ಯಕ್ಕೆ ಕೃಷಿ ಇಲಾಖೆ ಚಾಲನೆ ನೀಡಿದೆ.

ರಾಯಚೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ ಇ-ಸ್ಯಾಪ್ ತಂತ್ರಾಂಶ ಕೀಟ ರೋಗಗಳ ನಿವಾರಣೆಯ ಜತೆಗೆ, ಪೋಷಕಾಂಶಗಳ ಕೊರತೆಯನ್ನು ನೀಗಿಸಲು ನೆರವಾಗುತ್ತದೆ. ರೋಗದ ತೀವ್ರತೆ, ಹವಾಮಾನ ಪರಿಸ್ಥಿತಿ, ಬೆಳೆಯ ಆರ್ಥಿಕ ಪ್ರಾಮುಖ್ಯದ ಆಧಾರದಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಮಾಹಿತಿಯನ್ನು ರೈತರಿಗೆ ಒದಗಿಸಲಾಗುತ್ತದೆ.

ಈ ತಂತ್ರಜ್ಞಾನದಿಂದಾಗಿ ಕೀಟಗಳ ನಾಶಕ್ಕೆ ಅನಗತ್ಯ ರಾಸಾಯನಿಕ, ಕೀಟನಾಶಗಳ ಬಳಕೆ ತಗ್ಗಿಸಬಹುದು. ಇದುವರೆಗೆ 1.76 ಲಕ್ಷ ರೈತರು ಪ್ರಯೋಜನ ಪಡೆದಿದ್ದಾರೆ ಎಂದು ಕೃಷಿ ಇಲಾಖೆ ಹೇಳಿದೆ.

ಕೃಷಿ ಲಾಭಕ್ಕೆ 'ಬುದ್ಧಿಮತ್ತೆ'

ಒಂದನೇ ಪುಟದಿಂದ...

ರೈತರು ಆಗ ಎಲ್ಲೆಡೆ ವೆನಿಲಾ ಬೆಳೆಯಲು ಆರಂಭಿಸಿದರು. ಫಸಲು ಬರುವ ವೇಳೆಗೆ ಬೆಲೆ ಕುಸಿದಿತ್ತು. ಇದರಿಂದ ರಾಜ್ಯದ ರೈತರು ಭಾರಿ ನಷ್ಟ ಅನುಭವಿಸಿದ್ದರು. ನೆಟ್ಟಿದ್ದ ಎಲ್ಲ ಬಳ್ಳಿಗಳನ್ನು ಕಿತ್ತು ಹಾಕಿದ್ದರು. ಇಂಥ ಸಮಸ್ಯೆಗಳಿಗೆ ಸಂಪೂರ್ಣ ತಡೆ ಬೀಳಲಿದೆ. 'ದಿಢೀರ್ ಬೆಲೆ ಏರಿಕೆಯಾಗುವ ಬೆಳೆಗಳನ್ನು ರೈತರು ಸಮೂಹ ಸನ್ನಿಗೆ ಒಳಗಾದವರಂತೆ ಬೆಳೆಯಲು ಮುಂದಾಗುವುದನ್ನು ಕೃತಕ ಬುದ್ಧಿಮತ್ತೆ ಆಧಾರಿತ ಕೃಷಿ ಸೇವಾ ಕೇಂದ್ರಗಳು ತಡೆಯಲಿವೆ. ಇಲ್ಲವೇ, ದೀರ್ಘ ಸಮಯದವರೆಗೆ ಬೆಲೆ ಸ್ಥಿರತೆಯ ಮಾಹಿತಿ ಆಧಾರದಲ್ಲಿ ಬೆಳೆಗಳನ್ನು ಶಿಫಾರಸು ಮಾಡಲಿವೆ. ರಾಜ್ಯದಲ್ಲಿ ಅತಿ ಹೆಚ್ಚು ವಿಸ್ತರಿಸುತ್ತಿರುವ ಅಡಿಕೆ ಕ್ಷೇತ್ರದ ಭವಿಷ್ಯ, ಬೆಲೆ ಏರಿಳಿತ ಸೇರಿ ಎಲ್ಲ ಗೊಂದಲಗಳಿಗೂ ಈ ಕೇಂದ್ರ ಮಾರ್ಗ ತೋರಲಿವೆ' ಎನ್ನುತ್ತಾರೆ ಕೃಷಿ ತಜ್ಞ ಎಚ್. ಬಿ. ರಾಜಶೇಖರ್.

Steep price fall leaves tur farmers in the lurch

Duty-free imports, high production in other states & weather spoil hopes

VITTAL SHASTRI
KALABURAGI, DHNS

A drastic drop in the open market price of tur dal has dealt a heavy blow to small-scale farmers in the state, especially in Kalaburagi district, who were holding back their produce in anticipation of a higher price.

The rate of Kalaburagi's GI-tagged tur crop in the open market has touched a low of Rs 6,250 per quintal against Rs 12,750 prevailed in May 2024.

While the price crash is mainly attributed to the Union government's duty-free import policy till March next year, dal mill owners also cited high production in neighbouring Maharashtra, Andhra Pradesh and Telangana.

With the government ending its three-month procurement on May 31, the farmers are now forced to sell their crop at throw-away prices.

The district administration procured 6,68,422 quintals of tur crop during this period by paying a minimum support price (MSP) of Rs 8,000 per quintal to farmers.

However, many farmers did not approach the 189 collection centres, which were opened by the authorities in 2024.

Last year, the open market price was hovering around Rs 13,000 per quintal against the MSP of Rs 7,000 fixed by the government.

"The harvesting of tur crops begins in December every year and the markets witness heavy arrivals thereafter. We issued a notification in February to invite farmers for registration to allow them to sell their crop on the MSP from March to May-end. The price had reached an all-time high last year and hence, many farmers did not sell their last year's produce even though we had offered dynamic prices, despite Rs 7,000 per quintal fixed by the government," Agriculture Department Joint Director Samad Patel said.

Reasons such as import and more arrivals have led to a price crash this year, he added.

Meanwhile, Kalaburagi Dal Mills Owners' Association president Chandrashekhar Kobal claimed the quality of around 80% tur crop in the local market has been affected.

▸ Tur prices, Page 5



The tur tale

- Tur cultivation in K'taka: **17.44 lakh ha in 2024-25**
- Production: **9.98 lakh metric tonnes**
- Kalaburagi produced **5 lakh metric tonnes**
- Acreage in dist: **6.3 lakh ha**
- Open market price: **Rs 6,250 per quintal**
- Last year's max rate: **Rs 12,750**

Dec Hrd Pg 01

Steep price fall leaves tur farmers in the lurch

Tur prices, From Page 1

He cited fog and other natural factors resulting in the steep fall of prices. "Several small farmers stored their last year's crop for several months expecting better prices. But their expectation is belied due to good production in neighboring states and more import from other countries," Kobal added.

Farmer Devendrappa Mulagi, who hails from Kottaragi village of Aland taluk, said he was forced to sell his 20 quintals of crop at Rs 6,000 per quintal as the price continued to collapse on a daily basis. "I had stored the tur crop for three months expecting a good rate. I had to sell it after a long wait due to pressure to repay the loan taken from money lenders. Moreover, I needed money to undertake fresh sowing this season."

Out of the more than 9 lakh hectare agricultural land in the district, tur crop is cultivated in over 6 lakh hectares. The crop is also grown in neighboring districts of Bidar, Yadgir, Vijayapura and Raichur.

Karnataka Tur Growers Association president Basavaraj Ingin contended that the government has been importing cheap quality 'yellow PAP red gram' that has dealt a blow to Kalaburagi farmers who are growing a more nutritious crop. "India requires 45 lakh MT of tur crop for domestic consumption every year, while its actual production is 35 lakh MT. The government has resorted to excess import without levying any duty," he said.

BC

50,000 people visit three-day 'Sasya Santhe'

The Hindu Bureau
BENGALURU

Hindu Pg 04

The three-day 'Sasya Santhe' (plant fair) organised by Regional Horticulture Research and Extension Centre, University of Horticultural Sciences (UHS) on GKVK campus came to an end on Sunday. The fair saw a participation of around 50,000 people.

The fourth edition of the event was inaugurated recently. Speaking at the valedictory ceremony on Sunday, Revenue Minister Krishna Byre Gowda urged people to become more conscious of environmental conservation.



Participants at the valedictory programme of 'Sasya Santhe' and Environment Day celebration at the University of Horticultural Sciences in Bengaluru on Sunday.

100 stalls

There were more than 100 stalls that were set up in the fair selling various kinds of fruit, flower and ornamental saplings along with plantation, medicinal plants and vegetable seeds.

Vishnuvardhana, Vice-Chancellor of UHS Bagalakote delivered the presidential remarks and said, "In the next few days, we will launch a mega nursery on the UHS GKVK campus in Bengaluru where all kinds of quality seedlings, grafted plants, seeds, accessories, biofertlisers etc will be made available under a single roof. We will also provide training on urban horticulture, vertical gardening, terrace gardening, kitchen gardening, mushroom production, etc."